ಪಿ.ಡಬ್ಲ್ಯೂ-1

ದಿನಾಂಕ:31-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

ನಾನು ಮಕರಜ್ ಧ್ವಜ್ ಭರ್ಮಾ ಎಂಬುವರಿಗೆ ನನ್ನ ಸ್ವತನ್ನು ಬಾಡಿಗೆಗೆ ನೀಡಿದ್ದು ನಮ್ಮ ಇಬ್ಬರು ನಡುವೆ ಆಗಿದ್ದ ಬಾಡಿಗೆ ಕರಾರುಪತ್ರವನ್ನು ಬಾಡಿಗೆದಾರರು ಬೆಸ್ಕಾಂ ಪ್ರಾಧಿಕಾರಕ್ಕೆ ಕೊಟ್ಟು ವಿದ್ಯುಚ್ಛಕ್ತಿ ಸಂಪರ್ಕ ಪಡದಕೊಂಡಿರುತ್ತಾರೆ. ಈ ಸಂಬಂಧ ಕಾರ್ಯ ನಿರ್ವಾಹಕ ಅಬಿಯಂತರರು ನೀಡಿರುವ ಬಾಡಿಗೆ ಕರಾರುಪತ್ರದ ನಕಲು ಮತ್ತು ಬೋರ್ ವೆಲ್ ಇರುವ ಬಗ್ಗೆ ಕೊಟ್ಟರುವ ಅರ್ಜಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಸರ್ಟಿಫಿಕೇಟ್ ಗಳನ್ನು ಹಾಜರುಪಡಿಸಿರುತ್ತೇನೆ. ದಾಖಲೆ ನೋಡಲಾಗಿ ಬಾಡಿಗೆ ಕರಾರು ಪತ್ರ ರೂ.100 ಚಾಪಾ ಕಾಗದದ ಮೇಲೆ ಬರೆಯಲಾಗಿದ್ದು ಅದು ನಿಗದಿತ ಸ್ಟಾಂಪ್ ಶುಲ್ಕದ ಅಡಿ ಬರೆಯದೇ ಇರುವ ಕಾರಣ ದಾಖಲೆ ಗುರುತಿಸಲು ತಿರಸ್ಕರಿಗೆ ಅದನ್ನು ತಡೆ ಹಿಡಿಯಲಾಯಿತು. ಅರ್ಜಿಯ ನಕಲ್ನು ನಿಪಿ.40 ಎಂದು ಗುರುತಿಸಲಾಯಿತು. ಕಾರ್ಯ ನಿರ್ವಾಹಕ ಅಬಿಯಂತರರು ಕೊಟ್ಟಿರುವ ಹಿಂಬರಹ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.41 ಎಂದು ಗುರುತಿಸಲಾಯಿತು. ಸ್ವತ್ತಿಗೆ ವಿದ್ಯುಚ್ಛಕ್ತಿ ಮೀಟರ್ ಅಳವಡಿಸಿರುವ ಸಂಬಂಧ ನೀಡಿರುವ ವರದಿಯ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.42 ಎಂದು ಗುರುತಿಸಲಾಯಿತು. ಬಿಬಿಎಂಪಿ ಇಂದ ನೀಡಿರುವ ಅಸಿಸ್ಮೆಂಟ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.43 ಎಂದು ಗುರುತಿಸಲಾಯಿತು. ಕಂದಾಯ ಕಟ್ಟಿರುವ ರಸೀದಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.44 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ 4 ರಿಂದ 8 ರ ಪರ ಶ್ರೀ ಎಸ್.ಎಸ್.ಎನ್ ವಕೀಲರಿಂದ :**

ನನಗೆ ನಿಪಿ.40 ದಾಖಲೆಯ ದೃಡೀಕರಣವನ್ನು ಫೆಬ್ರವರಿ -2014 ರಂದು ಕೊಟ್ಟಿರುತ್ತಾರೆ. ನಾನು ಹಾಜರುಪಡಿಸಿರುವ ನಿಪಿ.40 ದಾಖಲೆಗೆ ಸಂಬಂಧಿಸಿದಂತೆ ನನ್ನ ವಾದಪತ್ರದಲ್ಲಿ ಮತ್ತು ನನ್ನ

ಸಾಕ್ಷ್ಯ ಪ್ರಮಾಣಪತ್ರದಲ್ಲಿ ಉಲ್ಲೇಖಿರಸಿರುತ್ತೇನೆ. ನಾನು ಈ ದಾಖಲೆಯ ಬಗ್ಗೆ ನನ್ನ ವಾದಪತ್ರದಲ್ಲಿ ಮತ್ತು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಉಲ್ಲೇಖ ಮಾಡದೇ ಇದ್ದರೂ ಸಹ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.41 ನ್ನು ನನಗೆ 2014 ಅಥವಾ 2016 ನೇ ಸಾಲಿನಲ್ಲಿ ಕೊಟ್ಟಿರುತ್ತಾರೆ ಆದರೆ ನಿಖರವಾಗಿ ನೆನಪಿಲ್ಲ. ನಿಪಿ.41 ನ್ನು ನನಗೆ ದಿ.14-12-2020 ರಂದು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.41 ದಾಖಲೆಯನ್ನು ನಾನು ಈ ಕೇಸಿಗಾಗಿ ಇತ್ತೀಚೆಗಷ್ಟೆ ಸೃಷ್ಟಿ ಮಾಡಿರುವ ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನನಗೆ ನಿಪಿ.42 ನ್ನು ದಿ.09-04-2004 ರಂದು ಕೊಟ್ಟಿರುತ್ತಾರೆ. ನಾನು ಈ ದಾಖಲೆಯ ಬಗ್ಗೆ ನನ್ನ ವಾದಪತ್ರದಲ್ಲಿ ಮತ್ತು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮೊದಲೇ ನನ್ನ ಬಳಿ ನಿಪಿ.42 ದಾಖಲೆ ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾನು ಅರ್ಜಿ ಸಲ್ಲಿಸಿ ಈಗ ಪಡೆದುಕೊಂಡಿರುತ್ತೇನೆ ಎನ್ನುತ್ತಾರೆ. ನಾನು ದಾಖಲೆ ಪಡೆದುಕೊಳ್ಳಲು ಯಾವಾಗ ಅರ್ಜಿ ಕೊಟ್ಟಿರುತ್ತೇನೆ ಎಂದು ಈಗ ನೆನಪಿಲ್ಲ, ಆದರೆ 2020 ಇರಬಹುದು. ನಾನು ನಿಪಿ.42 ನ್ನು ಈ ಕೇಸಿಗಾಗಿ ಇತ್ತೀಚೆಗಷ್ಟೆ ಸೃಷ್ಟಿ ಮಾಡಿರುವ ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನನ್ನ ಸ್ವತ್ತಿಗೆ ಅಳವಡಿಸಿರುವ ವಿದ್ಯುಚ್ಚಕ್ತಿ ಮೀಟರ್ ನಂಬರ್ 974 ಆಗಿರುತ್ತದೆ. ಸದರಿ ಈ ನಂಬರ್ ಇನ್‌ಸ್ಟಾಲೇಶನ್ ನಂಬರ್ ಮಾತ್ರ ಆಗಿದ್ದು ಮೀಟರ್ ನಂಬರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಶಾಮೀಲಾಗಿ ಈ ಕೇಸಿಗಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ಇಶ್ರತ್ ಜಹಾನ್ ಆರಾ)
**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**